ಶ್ರೀ ಚೌದರೆಡ್ಡಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ 1993ನೇ, ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ

ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ,1993 ಪರಿಯಾಲೋಚನ ಪ್ರಸ್ತಾಪ

*ಶ್ರೀ ವೈ.ಕೆ.ರಾಮಯ್ಯ (ಕುಣಿಗಲ್) (ಮುಂದೆವರೆದ ಚರ್ಚೆ) : ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಸದನದ ಮುಂದೆ ಮಂಡಿಸಿರತಕ್ಕಂಥ ಪಂಚಾಯತ್ ರಾಜ್ ವಿಧೇಯಕವನ್ನು ನಾನು ಸ್ವಾಗತಿಸಿರುತ್ತೇನೆ.ಆದರೆ ಈ ಸ್ವಾಗತ ಷರತ್ತಿನಿಂದ ಕೂಡಿದಂತಹ ಸ್ವಾಗತ. ಅದಕ್ಕೆ ಕಾರಣವೇನೆಂದರೆ ಗ್ರಾಮಪಂಚಾಯತಿಗಳನ್ನು ಗ್ರಾಮಸ್ವರಾಜ್ಯವನ್ನಾಗಿ ಮಾಡುವಂತಹ ಒಂದು ವಿಧೇಯಕವನ್ನು ತಂದಿದ್ದಾರೆ ಅದ್ದರಿಂದ ನಾನು ಈ ವ್ಯವಸ್ಥೆಯನ್ನು ವಿರೋಧ ಮಾಡುವುದಕ್ಕೆ ಸಿದ್ದನಿಲ್ಲ. ಅದರೆ ಈ ವ್ಯವಸ್ಥೆಯನ್ನು ತರುವುದಕ್ಕೆ ರಚಿಸಿದಂತಹ ವಿಧೇಯಕದಲ್ಲಿ ಇರುವಂತಹ ಕೆಲವು ಅಸಂಗತ ವಿಷಯಗಳನ್ನು ತಪ್ಪುಗಳನ್ನು ಮತ್ತು ಯಾವ ಉದ್ದೇಶ ಇತ್ತು ಆ ಉದ್ದೇಶದ ವಿಫಲತೆ ಮಾಡುವಂತಹ ವಿಚಾರಗಳು ಏನಿದೆ ಅವುಗಳನ್ನು ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತರುವಂತಹ ಅಧಿಕಾರವನ್ನು ಉಳಿಸಿಕೊಂಡು ಷರತ್ತಿನ ಮೇಲೆ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಇಂತಹ ಒಂದು ಪ್ರಾಮುಖ್ಯವಾದ ವಿಧೇಯಕವನ್ನು ತರುವಾಗ ಬಹುಶಃಎಷ್ಟು ಎಚ್ಚರಿಕೆಯನ್ನು ವಹಿಸಬೇಕಾಗಿತ್ತೋ, ಎಷ್ಟು ಅಸಕ್ತಿಯನ್ನು ವಹಿಸಬೇಕಾಗಿತ್ತೋ, ಅಷ್ಟು ಎಚ್ಚರಿಕೆಯನ್ನು ಅಷ್ಟು ಅಸಕ್ತಿಯನ್ನು ಸರ್ಕಾರ ವಹಿಸಿಲ್ಲವೆಂದು ನನ್ನ ಭಾವನೆ. ನಾನು ನಿಮಗೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ನಮ್ಮಮಂತ್ರಿಗಳು ನಾವು ಹಿಂದೆ ತಂದಂತಹ ವಿಧೇಯಕದ ಅನುಭವದ ಆಧಾರದ ಮೇಲೆ ಹೊಸದಾದ ಒಂದುವಿಧೇಯಕವನ್ನು ತಂದಿದ್ದೇವೆ ಎನ್ನುವ ಮಾತನ್ನು ಹೇಳಿದರು. ಆ ಅನುಭವದ ಆಧಾರದ ಮೇಲೆ ವಿಧೇಯಕವನ್ನು ಸಿದ್ದ ಮಾಡುವಾಗ ಗ್ರಾಮಾಂತರ ಪ್ರದೇಶದ ಆಡಳಿದ ವ್ಯವಸ್ಥೆಯನ್ನು ನಿಮ್ಮ ಕೈಗೆ ಮುಂದೆ ಇಡುವಾಗ ಎಷ್ಟು ಅಸಕ್ತಿಯನ್ನು ವಹಿಸಿದ್ದೀರಿ ಎಷ್ಟುಶ್ರಮ ತೋರಿಸಿದ್ದೀರಿ ಎನ್ನುವುದಕ್ಕೆ ನಾನು ಒಂದೇ ಒಂದು ಉದಾಹರಣೆ ಹೇಳುವುದಕ್ಕೆ ಇಷ್ಟಪಡುತ್ತೇನೆ.ಈ ವಿಧೇಯಕದಲ್ಲಿರತಕ್ಕಂಥ ಇಂಗ್ಲೀಷ್ ನಕಲು ಮತ್ತು ಕನ್ನಡದ ನಕಲು ಎರಡೂ ನಕಲುಗಳಲ್ಲಿ ಇರುವಂತಹ ವ್ಯತ್ಯಾಸವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. even on material acts, there is a glaring difference between the English version and the Kannada version ಇದು ಮಿನಿಮಮ್ ಕಾಗುಣಿತ ತಪ್ಪಾಗಿದ್ದರೆ ನಾನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ.